


International Journal of Kannada Research
www.kannadajournal.com

**ISSN: 2454–5813**
IJKR 2018; 4(3): 26-30
© 2018 IJKR
www.kannadajournal.com
Received: 28-05-2018
Accepted: 29-06-2018

**ಡಾ. ಸುರೇಶ ಬಿ.**
ಇತಿಹಾಸ ಸಹ ಪ್ರಾಧ್ಯಾಪಕರು, ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ), ಚಿತ್ರದುರ್ಗ

**Correspondence**
**ಡಾ. ಸುರೇಶ ಬಿ.**
ಇತಿಹಾಸ ಸಹ ಪ್ರಾಧ್ಯಾಪಕರು, ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ), ಚಿತ್ರದುರ್ಗ

# ದಾವಣಗೆರೆಜಿಲ್ಲೆಯ ಶಾಸನೋಕ್ತ ದೇವಾಲಯಗಳು

**ಡಾ. ಸುರೇಶ ಬಿ**

ದಾವಣಗೆರೆಜಿಲ್ಲೆಯು ಆಡಳಿತಾತ್ಮಕವಾಗಿ ತೀರಾಇತ್ತೀಚೆಗೆ ಅಸ್ತಿತ್ವಕ್ಕೆ ಬಂದಿದ್ದರೂಇಲ್ಲಿನ ಇತಿಹಾಸವು ಪ್ರಾಗ್–ಚಾರಿತ್ರಿಕಕಾಲದಿಂದಲೇಪ್ರಾರಂಭಗೊಂಡಿರುವುದನ್ನುನೋಡುತ್ತೇವೆ.ಆಕನೂರು,ಗೋವಿನಕೋವಿ,ಚಿಕ್ಕಬಸೂರು,ತಕ್ಕನಹಳ್ಳಿ,ಲಿಂಗದಹಳ್ಳಿ,ಹನಗವಾಡಿ, ನ್ಯಾಮತಿ ಹಾಗೂ ಇನ್ನಿತರ ಪ್ರಾಗ್–ಚಾರಿತ್ರಿಕ ನಿವೇಶನಗಳು ಇಲ್ಲಿನಪ್ರಾಗ್–ಇತಿಹಾಸವನ್ನು ನಿರೂಪಿಸುತ್ತವೆ.ಮೌರ್ಯರ ಶಾಸನಗಳು ಈ ಪ್ರದೇಶದಲ್ಲಿದೊರೆಯದೆಹೋದರೂ ಪಕ್ಕದಚಿತ್ರದುರ್ಗಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನ ಬ್ರಹ್ಮಗಿರಿ,ಸಿದ್ದಾಪುರ ಮತ್ತು ಜಟಿಂಗರಾಮೇಶ್ವರಗಳಲ್ಲಿ ದೊರೆತಿರುವುದರಿಂದ ಪ್ರಾಯಶಃ ಈ ಪ್ರದೇಶವೂ ಸಹ ಮೌರ್ಯರ ಆಡಳಿತ ವ್ಯಾಪ್ತಿಗೆ ಒಳಪಟ್ಟಿತ್ತೆಂದು ಹೇಳಬಹುದು. ಬದಾಮಿಚಾಲುಕ್ಯರ ಶಾಸನಗಳು ಇಲ್ಲಿದೊರೆಯದಿದ್ದರೂ ಸಮಕಾಲೀನ ಸಂದರ್ಭದಲ್ಲಿರಚನೆಗೊಂಡಿರುವ ಶಿಲ್ಪಗಳು, ವೀರಗಲ್ಲುಗಳು, ಸತಿಶಿಲ್ಪಗಳು ಹಾಗು ಇನ್ನಿತರ ಐತಿಹಾಸಿಕ ಕುರುಹುಗಳು ಈ ಪ್ರದೇಶವು ಬದಾಮಿಚಾಲುಕ್ಯರ ಪ್ರತ್ಯಕ್ಷವಾಗಿಅಥವ ಪರೋಕ್ಷವಾಗಿ ಬದಾಮಿಚಾಲುಕ್ಯರ ಆಡಳಿತ ವ್ಯಾಪ್ತಿಗೆ ಒಳಪಟ್ಟಿತ್ತು ಎನ್ನುವುದನ್ನುಧೃಡೀಕರಿಸುತ್ತವೆ. ರಾಷ್ಟ್ರಕೂಟರಿಂದ ವಿಜಯನಗರೋತ್ತರಕಾಲದವರೆಗೆಇಲ್ಲಿ ಆಳ್ವಿಕೆ ಮಾಡಿದವಲ್ಲ ಪ್ರಮುಖ ಅರಸುಮನೆತನಗಳ ಶಾಸನಗಳು ಇಲ್ಲಿದೊರೆತಿದ್ದು ಅವುಗಳು ಈ ಪ್ರದೇಶದರಾಜಕೀಯ, ಸಾಮಾಜಿಕ, ಧಾರ್ಮಿಕ ಹಾಗು ಸಾಂಸ್ಕೃತಿಕಇತಿಹಾಸವನ್ನು ತಿಳಿಸುತ್ತವೆ.

ದಾವಣಗೆರೆಜಿಲ್ಲೆಯ ಶಾಸನಗಳು ಎಫಿಗ್ರಫಿಯಾಕರ್ನಾಟಿಕ ಸಂ.೧೧ ಮತ್ತು ಸಂ.೭, ಸೌತ್ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್‌ಸಂ.೯, ಕ.ವಿ.ವಿ ಶಾಸನ ಸಂ.೧ ಹಾಗೂ ಎಂ.ಎ.ಆರ್ ವರದಿಗಳಲ್ಲಿ (೧೯೨೯–೪೦)ಪ್ರಕಟಗೊಂಡಿವೆ. ಈ ಎಲ್ಲಾ ಆಕರಗಳ ಜೊತೆಗೆಕ್ಷೇತ್ರಕಾರ್ಯದಲ್ಲಿ ಗಮನಿಸಿದ ಅಂಶಗಳನ್ನು ಬಳಸಿಕೊಂಡು ಪ್ರಸ್ತುತ ಲೇಖನವನ್ನು ಸಿದ್ದಪಡಿಸಲಾಗಿದೆ.

**‘ದೇವಾಲಯಗಳಿಲ್ಲದ ಊರುಗಳಿಲ್ಲ**’ಎನ್ನುವನಾಣ್ಣುಡಿಯಂತೆ, ಇಂದುದಾವಣಗೆರೆಜಿಲ್ಲೆತಯಾದ್ಯಾಂತ ಬಹುತೇಕ ಗ್ರಾಮಗಳಲ್ಲಿ, ನಗರಗಳಲ್ಲಿ ದೇವಾಲಯಗಳನ್ನು ನೋಡುತ್ತೇವೆ. ಪ್ರಸ್ತುತದಾವಣಗೆರೆಜಿಲ್ಲೆಯಲ್ಲಿಐದುನೂರಕ್ಕೂಅಧಿಕ ದೇವಾಲಯಗಳು ಕಾಣಸಿಗುತ್ತವೆ.ಅವುಗಳಲ್ಲಿ ಸುಮಾರು ನೂರಕ್ಕೂಅಧಿಕ ದೇವಾಲಯಗಳು ವಿವಿಧಶಾಸನಗಳಲ್ಲಿ ಉಲ್ಲೇಖವಾಗಿವೆ.ಆದರೆ ಇವುಗಳಲ್ಲಿ ಕೆಲವು ಸಂಪೂರ್ಣವಾಗಿ ನಾಶವಾಗಿದ್ದು ಶಾಸನೋಲ್ಲೇಖಿತ ಪ್ರದೇಶದಲ್ಲಿದೇವಾಲಯದಯಾವುದೇ ಕುರುಹುಗಳು ದೊರೆಯುವುದಿಲ್ಲ. ಇನ್ನುಕೆಲ ದೇವಾಲಯಗಳು ವಿನಾಶದಅಂಚಿನಲ್ಲಿವೆ. ವಾಸ್ತುಶೈಲಿಯದೃಷ್ಟಿಯಿಂದ ಪ್ರಮುಖವಾಗಿರುವ ಕೆಲವೇ ಕೆಲವು ದೇವಾಲಯಗಳು ಮಾತ್ರಕೇಂದ್ರ / ರಾಜ್ಯಪುರಾತತ್ವಇಲಾಖೆಯ ಮೇಲ್ವಚಾರಣೆಯಲ್ಲಿಸುಸ್ಥಿತಿಯಲ್ಲಿದ್ದು,ಇನ್ನುಳಿದ ಬಹುತೇಕ ದೇವಾಲಯಗಳು ಶಿಥಿಲಾವಸ್ತೆಯಲ್ಲಿವೆ.ಇಲ್ಲಿ ಗಮನಿಸಬೇಕಾಗಿರುವ ಮತ್ತೊಂದು ಪ್ರಮುಖಅಂಶವೆಂದರೆಇಲ್ಲಿನ ಬಹುತೇಕ ದೇವಾಲಯಗಳು ಕಾಲಾನಂತರದಲ್ಲಿವಿಸ್ತರಣೆಗೊಂಡಿವೆ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡುದಾವಣಗೆರೆಜಿಲ್ಲೆಯಲ್ಲಿಕಂಡುಬರುವ ಶಾಸನೋಲ್ಲೇಖಿತ ದೇವಾಲಯಗಳನ್ನು ಗುರುತಿಸಲು ಪ್ರಯತ್ನಿಸಲಾಗಿದೆ.

ಹರಿಹರದ ಹರಿಹರೇಶ್ವರದೇವಾಲಯದ ನಿರ್ಮಾಣದ ಕಾಲವನ್ನುದಾವಣಗೆರೆಜಿಲ್ಲೆಯಲ್ಲಿಕಂಡುಬರುವ ಶಾಸನೋಲ್ಲೇಖಿತ ದೇವಾಲಯಗಳಲ್ಲಿ ಆರಂಭಕಾಲಕ್ಕೆಉದಾಹರಿಸಬಹುದು.ಬಾಗಳಿಯ ಕಲ್ಲೇಶ್ವರದೇವಾಲಯವೂ ಸಹ ಸರಿಸುಮಾರುಇದೇಕಾಲಾವಧಿಯದ್ದು.ರಾಷ್ಟ್ರಕೂಟಕಾಲದ ಲಕ್ಷಣಗಳನ್ನು ಇಲ್ಲಿನಗರ್ಭಗೃಹ ಮತ್ತು ಅಂತರಾಳ ಭಾಗಗಳಲ್ಲಿ ಗುರುತಿಸಬಹುದು. ಕಲ್ಯಾಣದಚಾಲುಕ್ಯರಕಾಲಾವಧಿಯಲ್ಲಿಅಥವಅದಕ್ಕೂ ಪೂರ್ವದಲ್ಲೇ ನಿರ್ಮಾಣಗೊಂಡುನಂತರದ ಕಾಲಾವಧಿಯಲ್ಲಿ ವಿಸ್ತಾರಗೊಂಡಿರುವ ದೇವಾಲಯಗಳ ಸಂಖ್ಯೆ ಈ ಭಾಗದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಅನೆಕೊಂಡದಈಶ್ವರ, ಲೋಕಿಕೆರೆಯಕಲ್ಮೇಶ್ವರ, ಎಲೆಬೇತೂರಿನಕಲ್ಮೇಶ್ವರ ಹಾಗು ಇನ್ನಿತರ ದೇವಾಲಯಗಳನ್ನು ಉದಾಹರಿಸಬಹುದು.

ಕಲ್ಯಾಣದಚಾಲುಕ್ಯ – ಹೊಯ್ಸಳ ಕಾಲದಲ್ಲಿ ನಿರ್ಮಾಣಗೊಂಡಿರುವ ನೀಲಗುಂದದ ಭೀಮೇಶ್ವರದೇವಾಲಯ ಈ ಭಾಗದಅತ್ಯಂತಆಕರ್ಷಣೀಯವಾದದೇವಾಲಯ. ಅಮೃತಾಪುರದ ಮಾಣಿಕ್ಯೇಶ್ವರದೇವಾಲಯವೂ ಸಹ ಇದೇಕಾಲಾವಧಿಯಲ್ಲಿ ನಿರ್ಮಾಣಗೊಂಡಿದೆ. ಮಾಯಕೊಂಡದ ಓಬಳೇಶ್ವರ, ಶಾಂತಿಸಾಗರದ ಸಿದ್ದೇಶ್ವರ ಹಾಗೂ ಇನ್ನಿತರ ದೇವಾಲಯಗಳು ವಿಜಯನಗರ – ಪಾಳೆಯಗಾರರ ಕಾಲಾವಧಿಯಲ್ಲಿ ನಿರ್ಮಾಣಗೊಂಡವುಗಳಾಗಿವೆ. ಇಲ್ಲಿನ ಬಹುತೇಕ ದೇವಾಲಯಗಳು ದ್ರಾವಿಡಶೈಲಿಯಲ್ಲಿದ್ದು ಏಕಕೂಟ, ದ್ವಿಕೂಟ ಹಾಗೂ ತ್ರಿಕೂಟ ಮಾದರಿಯಲ್ಲಿವೆ.ವಿರಳವಾಗಿ, ಕದಂಬ ನಾಗರ ಮತ್ತು ವೇಸರಶೈಲಿಯ ದೇವಾಲಯಗಳೂ ಇಲ್ಲಿವೆ. ಧಾರ್ಮಿಕವಾಗಿ ಶೈವದೇವಾಲಯಗಳೇ ಹೆಚ್ಚಿನಸಂಖ್ಯೆಯಲ್ಲಿದ್ದರೂ, ವೈಷ್ಣವ, ಜೈನ ಹಾಗೂ ಇನ್ನಿತರ ಧಾರ್ಮಿಕ ಕಟ್ಟಡಗಳೂ ಇಲ್ಲಿವೆ.

ಹರಿಹರದ ಹರಿಹರೇಶ್ವರ ದೇವಾಲಯ ಹಾಗೂ ಇಲ್ಲಿನ ಸಮುಚ್ಚಯ ಒಂದು ಪ್ರಮುಖ ವಾಸ್ತುಕೃತಿಯಾಗಿದೆ. ಈ ದೇವಾಲಯ ಸಮೂಹವು ನಗರದ ಪಶ್ಚಿಮ ಭಾಗದಲ್ಲಿ ತುಂಗಭದ್ರ ನದಿಯ ಬಲದಂಡೆಯ ಮೇಲಿದೆ.ಈ ದೇವಾಲಯವನ್ನು ಕುರಿತಂತೆ, ಅದರ ನಿರ್ಮಾಣದ ಬಗ್ಗೆ ಮತ್ತು ಅದರಲ್ಲಿರುವ ಹರಿಹರನ ಶಿಲ್ಪದ ಬಗ್ಗೆ ಹಲವಾರು ವಿದ್ವಾಂಸರು ವಿಭಿನ್ನ ದೃಷ್ಟಿಕೋನಗಳಿಂದ ಅಧ್ಯಯನ ಮಾಡಿದ್ದಾರೆ. ದೇವಾಲಯ ನಿರ್ಮಾಣದ ಆರಂಭಕಾಲದ ಬಗ್ಗೆ ಖಚಿತವಾಗಿ ಹೇಳುವುದು ಕಷ್ಟದ ವಿಷಯವಾದರೂ, ದೇವಾಲಯಕ್ಕೆ ಸಂಭಂಧಿಸಿದಂತೆ ಕ್ರಿ.ಶ ೧೧೦೦ ರಿಂದ ಶಾಸನಗಳು ದೊರೆಯುತ್ತವೆ.ಉಚ್ಚಂಗಿಯ ಪಾಂಡ್ಯರು, ದೇವಗಿರಿಯ ಯಾದವರು ಮತ್ತು ಹೊಯ್ಸಳರ ಬಹುಸಂಖ್ಯೆಯ ಶಾಸನಗಳು ಇಲ್ಲಿ ದೊರೆತಿವೆ. ದೇವಾಲಯದ ಹೆಚ್ಚಿನ ಭಾಗಗಳು ಹೊಯ್ಸಳರ ಕಾಲಾವಧಿಯಲ್ಲಿಯೇ ಆಗಿರುವುದು ಇಲ್ಲಿನ ಶಾಸನಗಳಿಂದ ಮತ್ತು ವಾಸ್ತುಲಕ್ಷಣಗಳಿಂದ ಸ್ಪಷ್ಟವಾಗುತ್ತದೆ.

ಹರಿಹರೇಶ್ವರ ದೇವಾಲಯವು ವಿಶಾಲವಾದ ತಳವಿನ್ಯಾಸದಲ್ಲಿ ನಿರ್ಮಾಣಗೊಂಡಿದ್ದು ಪೂರ್ವಾಭಿಮುಖವಾಗಿದೆ. ಗರ್ಭಗೃಹ, ಶುಕನಾಸ, ನವರಂಗ ಹಾಗೂ ವಿಶಾಲವಾದ ಮಹಾಮಂಟಪವನ್ನು ಹೊಂದಿದೆ.ಗರ್ಭಗೃಹದಲ್ಲಿ ಹರಿಹರನ ಸ್ಥಾನಿಕ ಶಿಲ್ಪವಿದೆ. ವಿತಾನದಲ್ಲಿ ಪದ್ಮದ ಅಲಂಕರಣೆಯಿದೆ.ಪ್ರವೇಶದ್ವಾರವು ಸರಳವಾಗಿದ್ದು ಪೇದ್ಯದಲ್ಲಿ ಕುಂಭದ ಅಲಂಕರಣೆಯಿದೆ.ಶುಕನಾಸಿಯಲ್ಲಿ ಯಾವುದೇ ಶಿಲ್ಪಗಳಿಲ್ಲ. ವಿತಾನದಲ್ಲಿ ಪದ್ಮದ ಅಲಂಕರಣೆಯಿದೆ.ಪ್ರವೇಶದ್ವಾರದ ಬಲಪೇದ್ಯದಲ್ಲಿ ಇಬ್ಬರು ಶೈವ ದ್ವಾರಪಾಲಕರು ಹಾಗೂ ಎಡಪೇದ್ಯದಲ್ಲಿ ಇಬ್ಬರು ವೈಷ್ಣವ ದ್ವಾರಪಾಲಕರಿರುವರು.ಪ್ರವೇಶದ್ವಾರವು ಪುಷ್ಪ, ಲತಾ ಹಾಗು ಸ್ತಂಭಶಾಖೆಗಳಿಂದ ಅಲಂಕೃತಗೊಂಡಿದೆ. ಸ್ತಂಭಶಾಖೆಯ ಇಕ್ಕೆಲಗಳಲ್ಲಿ ಪುಷ್ಪಗಳಿಂದ ಅಲಂಕೃತಗೊಂಡಿರುವ ಜಾಲಾಂಧ್ರಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ.

ನಾಲ್ಕು ಕಂಭಗಳಿಂದ ಕೂಡಿದ ನವರಂಗವು ಮೂರು ಪ್ರವೇಶದ್ವಾರಗಳನ್ನು ಹೊಂದಿದೆ.ತಿರುಗುಣಿ ಯಂತ್ರದ ಸಹಾಯದಿಂದ ನಿರ್ಮಿಸಿರುವ ಇಲ್ಲಿನ ಕಂಭಗಳು ಘಂಟಾಕೃತಿಯಲ್ಲಿವೆ. ಪೀಠ, ಬಳೆಗಳಾಕಾರದ ದಿಂಡು, ಪುಷ್ಪಾಲಂಕಾರದ ಬೋಧಿಗೆ ಭಾಗಗಳನ್ನು ಹೊಂದಿರುವ ಈ ಕಂಭಗಳು ಬಳಪದಕಲ್ಲಿನಿಂದ ನಿರ್ಮಾಣಗೊಂಡಿವೆ. ಭುವನೇಶ್ವರಿಯಲ್ಲಿ ಅಷ್ಟದಿಕ್ಪಾಲಕರನ್ನು ವಾಹನಸಮೇತರಾಗಿ ಅತ್ಯಂತ ಸುಂದರವಾಗಿ ತೋರಿಸಲಾಗಿದೆ. ಉತ್ತರದಿಂದ ಕ್ರಮವಾಗಿ ಕುಭೇರ, ಈಶಾನ, ಇಂದ್ರ, ಅಗ್ನಿ, ಯಮ, ನಿಋತಿ, ವರುಣ, ಮತ್ತು ವಾಯು ಇರುವರು.ಮಧ್ಯದ ಪಟ್ಟಿಕೆ ಈಗ ನಾಶವಾಗಿದೆ.ನವರಂಗದ ಉಳಿದ ವಿತಾನಗಳಲ್ಲಿ ಕಮಲದ ಮೊಗ್ಗುಗಳಿವೆ.

ನವರಂಗದ ಮುಖ್ಯ (ಪೂರ್ವ) ಪ್ರವೇಶದ್ವಾರವು ರತ್ನ, ಪುಷ್ಪ, ಸ್ತಂಭ ಯಾಳಶಾಖೆಗಳಿಂದ ಅಲಂಕೃತಗೊಂಡಿದೆ.ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ.ಉತ್ತರಾಂಗವನ್ನು ಪುಷ್ಪ, ಲತೆ ಹಾಗೂ ಸ್ತಂಭಗಳಿಂದ ಅಲಂಕರಿಸಲಾಗಿದೆ. ಮಧ್ಯದಲ್ಲಿ ಹರಿಹರೇಶ್ವರ ಹಾಗೂ ಇಕ್ಕೆಲಗಳಲ್ಲಿ ಕೆಲವು ಧ್ಯಾನಾಸಕ್ತ ಮೂರ್ತಿಗಳನ್ನು ನಿರೂಪಿಸಿದ್ದು ಇವುಗಳನ್ನು ಕೀರ್ತಿಮುಖಗಳಿಂದ ಅಲಂಕರಿಸಲಾಗಿದೆ.

ನವರಂಗಕ್ಕೆ ಹೊಂದಿಕೊಂಡಂತೆ ಪೂರ್ವಕ್ಕೆ ವಿಶಾಲವಾದ ಮಹಾಮಂಟಪವಿದೆ.ಮಹಾಮಂಟಪಕ್ಕೆ ಪೂರ್ವ, ಉತ್ತರ ಮತ್ತು ದಕ್ಷಿಣದಲ್ಲಿ ಪ್ರವೇಶದ್ವಾರಗಳಿವೆ. ಇಲ್ಲಿ ಒಟ್ಟು ಅರವತ್ತೆಂಟು ವಿಭಿನ್ನಶೈಲಿಯ ಕಂಭಗಳಿವೆ. ಪ್ರತಿಯೊಂದು ಕಂಭವೂ ಸಹ ಪೀಠ, ಪಾದ, ಘಂಟಾಕಾರದ ದಿಂಡು, ಪುಷ್ಪಗಳಿಂದ ಅಲಂಕೃತಗೊಂಡಿರುವ ಬೋಧಿಗೆ ಭಾಗಗಳನ್ನು ಒಳಗೊಂಡಿವೆ. ಮಧ್ಯದ ಭುವನೇಶ್ವರಿಯಲ್ಲಿ ಮುಗುಚಿದ ಪದ್ಮದ ಅಲಂಕರಣೆಯಿದೆ.ಮಹಾಮಂಟಪದ ಸುತ್ತಲೂ ಕಕ್ಷಾಸನವಿದೆ.

ಏರುವಿನ್ಯಾಸದಲ್ಲಿ ಹರಿಹರೇಶ್ವರ ದೇವಾಲಯವು ಅಧಿಷ್ಠಾನದ ಮೇಲೆ ನಿಂತಿದೆ.ಅಧಿಷ್ಠಾನದಲ್ಲಿ ಉಪಾನ, ಜಗತಿ, ಪದ್ಮ, ಕಪೋತ, ದಂತಪಂಕ್ತಿಗಳನ್ನು ಹೊಂದಿದೆ.ಭಿತ್ತಿಯು ಸರಳವಾಗಿದ್ದು ಅರೆಗಂಭಗಳಿಂದ ನಿರ್ಮಾಣಗೊಂಡಿದೆ.ಎರಡೂ ಪಾರ್ಶ್ವಗಳಲ್ಲಿ ಕೋಷ್ಠಪಂಜರಗಳಿವೆ. ಈ ಎಲ್ಲಾ ಕೋಷ್ಠಗಳಿಗೆ ಒಂದೇ ಎತ್ತರದಲ್ಲಿ ಕಪೋತ ಪಟ್ಟಿಕೆಗಳಿವೆ. ಮೇಲ್ಬಾಗದಲ್ಲಿ ಶಿಖರಗಳಿವೆ. ದೇವಾಲಯದ ಭಿತ್ತಿಯ ಕೊನೇಸ್ತರದಲ್ಲಿ ಕಪೋತಭಾಗವು ಹೊರಚಾಚಿ ಕೆಳಕ್ಕೆ ಬಾಗಿದ ರೀತಿಯಲ್ಲಿದೆ.ಇದು ಮಹಾಮಂಟಪದ ಸುತ್ತಲೂ ಹೆಚ್ಚು ಹೊರಬಾಗಿದ್ದು ಇಂಗ್ಲೀಷಿನ ಎಸ್ ( ) ಆಕಾರದಲ್ಲಿದೆ.ಕಪೋತದ ಮೇಲ್ಬಾಗದಲ್ಲಿ ಕೂಟ, ಪಂಜರ ಹಾಗೂ ಕೀರ್ತಿಮುಖಗಳನ್ನು ನಿರೂಪಿಸಲಾಗಿದೆ.ಗರ್ಭಗೃಹದ ಮೇಲಿನ ಶಿಖರವು ದ್ರಾವಿಡ ಶೈಲಿಯಲ್ಲಿದ್ದು ಮೂರು ಹಂತಗಳಲ್ಲಿದೆ.ಈ ಭಾಗವು ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಾಣವಾಗಿರುವುದನ್ನು ಗಮನಿಸಿದರೆ ಬಹುಶಃ ನಂತರ ಕಾಲದ ರಚನೆಯಿರಬೇಕೆನಿಸುತ್ತದೆ.ನವರಂಗದ ಭಿತ್ತಿಯೂ ಸಹ ಇದೇ ರೀತಿಯ ಕೆತ್ತನೆಗಳನ್ನು ಹೊಂದಿದ್ದು ಕೋಷ್ಠಗಳ ಮಧ್ಯದಲ್ಲಿ ಹಲವಾರು ದೇವಾನುದೇವತೆಗಳ ಉಬ್ಬು ಶಲ್ಪಗಳಿವೆ. ಶುಕನಾಸಿಯಲ್ಲಿ ಶಿಖರಕ್ಕೆ ಹೊಂದಿಕೊಂಡಂತೆ ಸಳನು ಹುಲಿಯನ್ನು ಕೊಲ್ಲುತ್ತಿರುವ ಶಿಲ್ಪವಿದೆ.

ದೇವಾಲಯವು ವಿಶಾಲವಾದ ಪ್ರಾಕಾರವನ್ನು ಹೊಂದಿದ್ದು ಮಹಾದ್ವಾರವೂ ಇದೆ.ಪ್ರಾಕಾರದ ಒಳಭಾಗದಲ್ಲಿ ಸುತ್ತಲೂ ಲಕ್ಷ್ಮಿ, ಪಾರ್ವತಿ, ಇನ್ನು ಮುಂತಾದ ಕಿರು ದೇವಾಲಯಗಳಿವೆ. ಉತ್ತರ ಭಾಗದಲ್ಲಿ ಲಕ್ಷ್ಮೀ ದೇವಾಲಯವಿದೆ.ಇದೂ ಸಹ ಹರಿಹರೇಶ್ವರ ದೇವಾಲಯದ ಒಟ್ಟಾರೆ ವಿನ್ಯಾಸದ ಕಿರಿದಾದ ಅನುಕರಣೆ ಎನ್ನಬಹುದು.

ಕ್ರಿ.ಶ ೧೨೬೮ ರ ಇಲ್ಲಿನ ಶಾಸನವೊಂದು ಹೊಯ್ಸಳರ ದಂಡನಾಯಕ ಸೋಮನಾಥನು ಈ ದೇವಾಲಯದ ಮಹಾಗೋಪುರವನ್ನು ನಿರ್ಮಿಸಿದ ಎಂದು ಉಲ್ಲೇಖಿಸುತ್ತದೆ.ಆದರೆ ಪ್ರಸ್ತುತ ಗೋಪುರದ ಮೇಲಿನ ಅಂತಸ್ತುಗಳು ನಾಶವಾಗಿ ಇದೊಂದು ಸಾಧಾರಣ ದ್ವಾರಮಂಟಪದಂತೆ ಕಂಡುಬರುತ್ತದೆ.

ಹರಿಹರೇಶ್ವರ ದೇವಾಲಯಕ್ಕೆ ಸಂಭಂಧಿಸಿದಂತೆ ಸುಮಾರು ಅರವತ್ತಕ್ಕೂ ಹೆಚ್ಚು ಶಾಸನಗಳು ದೊರೆಯುತ್ತವೆ. ಆದರೆ ಯಾವ ಶಾಸನವೂ ಸಹ ಮೂಲ ದೇವಾಲಯದ ನಿರ್ಮಾಣದ ಬಗ್ಗೆ ಬೆಳಕುಚಲ್ಲುವುದಿಲ್ಲ. ಹರಿಹರೇಶ್ವರನ ಶಿಲ್ಪದ ರಚನಾ ವಿನ್ಯಾಸ ಕ್ರಿ.ಶ ಎಂಟನೇ ಶತಮಾನದ್ದಾಗಿರಬಹುದೆನ್ನುವ ಕೆಲವು ವಿದ್ವಾಂಸರ ಅಭಿಪ್ರಾಯದ ಹಿನ್ನಲೆಯಲ್ಲಿ ದೇವಾಲಯವೂ ಸಹ ಇದೇ ಕಾಲಮಾನದಲ್ಲಿ ನಿರ್ಮಾಣಗೊಂಡಿರಬಹುದು.ಕ್ರಿ.ಶ ೧೧೦೦ ರ ಉಚ್ಚಂಗಿ ಪಾಂಡ್ಯರ ಶಾಸನವು ಪಾಂಡ್ಯರ ದೊರೆಗಳಾದ ವೀರಪಾಂಡ್ಯ, ವಿಜಯಪಾಂಡ್ಯ, ಮತ್ತು ಕಳಚೂರಿಗಳ ಬಿಜ್ಜಳ, ಹೊಯ್ಸಳ, ಯಾದವ ಮತ್ತು ವಿಜಯನಗರದ ಅರಸರುಗಳು ಈ ದೇವಾಲಯದ ಉನ್ನತಿಗಾಗಿ ಹಲವಾರು ದಾನ–ದತ್ತಿಗಳನ್ನು ಬಿಟ್ಟಿರುವರು. ಆದರೆ ಹೊಯ್ಸಳರ ದೊರೆ ಎರಡನೇ ನರಸಿಂಹ ಮತ್ತು ಬಲ್ಲಾಳರ ಕಾಲದಲ್ಲಿ ಈ ಪ್ರದೇಶದ ದಂಡನಾಯಕನಾಗಿದ್ದ ಪೊಲಾಳ್ವನು ಈ ಹಿಂದೆ ಅಂದರೆ ಕ್ರಿ.ಶ ೧೧೨೪ ರಲ್ಲಿ ಪೆರ್ಮಾಡಿಯು ನಿರ್ಮಿಸಿದ್ದ ಈ ದೇವಾಲಯವನ್ನು ಸಂಪೂರ್ಣವಾಗಿ ಪುನರ್‌ನಿರ್ಮಿಸಿ ದೇವಾಲಯದ ಮೇಲೆ ನೂರಾಹದಿನೈದು ಬಂಗಾರದ ಕಳಶಗಳನ್ನು ಪ್ರತಿಷ್ಟಾಪಿಸಿದನೆಂದು ತಿಳಿದುಬರುತ್ತದೆ. ಹೊಯ್ಸಳ ನರಸಿಂಹನು ಈ ದೇವಾಲಯಕ್ಕೆ ಹಲವಾರು ರೀತಿಯ ದಾನದತ್ತಿಗಳನ್ನು ನೀಡಿದ ವಿಷಯ ಶಾಸನೋಕ್ತವಾಗಿದೆ. ಮಹಾದ್ವಾರವನ್ನು ನಿರ್ಮಿಸಿದ ಸೋಮನಾಥನೂ ಸಹ ಹೊಯ್ಸಳರ ದಂಡನಾಯಕನೇ ಆಗಿದ್ದು ಕ್ರಿ.ಶ ೧೨೬೮ ರಲ್ಲಿ ಈ ದೇವಾಲಯಕ್ಕೆ ಹಲವು ಉಪ್ಪರಿಗೆಯ ಮಹಾದ್ವಾರವನ್ನು ನಿರ್ಮಿಸಿ ಅದರ ಮೇಲೆ ಸುವರ್ಣಕಲಶಗಳನ್ನು ಇರಿಸಿದನೆಂದು ತಿಳಿದುಬರುತ್ತದೆ.ಅಲ್ಲದೆ ಇದೇ ಕಾಲದಲ್ಲಿ ತಾನು ಮೈಸೂರು ಜಿಲ್ಲೆಯ ಸೋಮನಾಥಪುರದಲ್ಲಿ ನಿರ್ಮಿಸಿದ

ಕೇಶವ ದೇವಾಲಯವನ್ನೂ ಕುರಿತ ವಿವರ ನೀಡಲಾಗಿದೆ.

ಬಾಗಳಿಯ (ಹರಪನಹಳ್ಳಿ) ಕಲ್ಲೇಶ್ವರ ದೇವಾಲಯವು ಶಾಸನಗಳ ಹಿನ್ನಲೆಯಲ್ಲಿ ತುಂಬಾ ಮುಖ್ಯವಾಗಿದುದಾಗಿದೆ.ಗ್ರಾಮದ ಈಶಾನ್ಯ ದಿಕ್ಕಿನಲ್ಲಿ ಕೆರೆಯ ಕೆರೆಯಹಿಂಬದಿಯಲ್ಲಿರುವ ಈ ದೇವಾಲಯವು ಅನೇಕ ಶಾಸನಗಳಲ್ಲಿ ಉಲ್ಲೇಖಗೊಂಡಿದೆ.ಅವುಗಳಲ್ಲಿ ಕ್ರಿ.ಶ ೯೮೭ ರ ಚಾಲುಕ್ಯ ಅರಸ ಅಹವಮಲ್ಲನ ಶಾಸನವು, ಆದಿತ್ಯದೇವರಿಗೆ ದುಗ್ಗಿಮಯ್ಯನು ದಾನ ನೀಡಿದ ವಿವರ ನೀಡುತ್ತದೆ.ಅನಂತಶಯನ ಪೀಠದ ಮೇಲಿರುವ ಕ್ರಿ.ಶ ೧೦೬೨ ರ ಮತ್ತೊಂದು ಶಾಸನ ದೇವಾಲಯದ ಶಿಲ್ಪಿ ನಾಗವರ್ಮನ ಹೇಸರನ್ನು ಉಲ್ಲೇಖಿಸಿದೆ. ಬಹುತೇಕ ಶಾಸನಗಳು ದಾನಶಾಸನಗಳೇ ಆಗಿದ್ದು, ಕಲಿದೇವ(ಕಲ್ಮೇಶ್ವರ), ಸೂರ್ಯ ಹಾಗೂ ನರಸಿಂಹ ದೇವರುಗಳಿಗೆ ದಾನ ನೀಡಿದ ವಿವರಗಳನ್ನೇ ನೀಡುತ್ತವೆ. ಹಾಗಾಗಿ ಈ ದೇವಾಲಯವನ್ನು ಶಿವ, ವಿಷ್ಣು ಮತ್ತು ಸೂರ್ಯರಿಗಾಗಿ ನಿರ್ಮಿಸಿದ ತ್ರೈಪುರುಷ ದೇವಾಲಯ ಎನ್ನಬಹುದು.

ವಾಸ್ತು ಶೈಲಿಯ ದೃಷ್ಠಿಯಿಂದ ಪ್ರಮುಖವಾಗಿರುವ ಈ ದೆವಾಲಯವು ಪೂರ್ವಾಭಿಮುಖವಾಗಿದ್ದು, ತಳವಿನ್ಯಾಸದಲ್ಲಿ ಗರ್ಭಗೃಹ, ಶುಕನಾಸ, ನವರಂಗ ಹಾಗೂ ವಿಶಾಲವಾದ ಮಹಾಮಂಟಪವನ್ನು ಹೊಂದಿದೆ.ಮಹಾಮಂಟಪದ ಪೂರ್ವಕ್ಕೆ ಸೂರ್ಯ ಹಾಗೂ ಉತ್ತರಕ್ಕೆ ನರಸಿಂಹ ದೇವಾಲಯಗಳಿವೆ. ಮುಖ್ಯ ಗರ್ಭಗೃಹದಲ್ಲಿ ಶಿವಲಿಂಗವಿದೆ.ವಿತಾನದಲ್ಲಿ ಪದ್ಮದ ಅಲಂಕರಣೆಯಿದೆ. ಪ್ರವೇಶದ್ವಾರವು ಸಪ್ತಶಾಖೆಗಳಿಂದ ಅಲಂಕೃತಗೊಂಡಿದೆ.ಪೇದ್ಯದಲ್ಲಿ ಗಂಗ–ಯಮುನೆಯರು ಹಾಗೂ ಇಕ್ಕೆಲಗಳಲ್ಲಿ ಶೈವ ದ್ವಾರಪಲಕರಿರುವರು. ಲಲಾಟದಲ್ಲಿ ಗಜಲಕ್ಷ್ಮಿ ಉಬ್ಬುಶಿಲ್ಪವಿದೆ.ಉತ್ತರಾಂಗದಲ್ಲಿ ಶಾಲ–ಪಂಜರ–ಕೂಟ ಮಾದರಿಯ ಅಲಂಕರಣೆಯಿದೆ. ಅಂತರಾಳದ ಪ್ರವೇಶದ್ವಾರವೂ ಸಹ ಗರ್ಭಗೃಹದ ಪ್ರವೇಶದ್ವಾರದಂತೆಯಿದೆ.ಆದರೆ ಇಲ್ಲಿನ ಉತ್ತರಾಂಗದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ತೋರಿಸಲಾಗಿದೆ.

ಇಲ್ಲಿನ ನವರಂಗದ ವಾಯುವ್ಯ ಮೂಲೆಯಲ್ಲಿ ನಂತರ ಕಾಲದಲ್ಲಿ ಜಾಲಾಂಧ್ರಗಳನ್ನು ಅಳವಡಿಸಿ ನಿರ್ಮಿಸಿರುವ ಚಿಕ್ಕ ಕೋಣೆಯಿದೆ.ನವರಂಗದ ಕಂಭಗಳು ಪೀಠ, ಪಾದ, ಬಹುಮುಖ, ಚೌಕ, ವೃತ್ತಾಕಾರದ ಫಲಕ ಮತ್ತು ಸರಳ ಬೊಧಿಗೆಗಳನ್ನು ಹೊಂದಿವೆ. ನಾಟ್ಯವೇದಿಕೆಯಲ್ಲಿ ನಂದಿಶಿಲ್ಪವಿದೆ.ಭುವನಾಶ್ವರಿಯಲ್ಲಿ ಮುಗುಚಿದ ಪದ್ಮದ ಅಲಂಕರಣೆಯಿದೆ.ನವರಂಗಕ್ಕೆ ಪೂರ್ವ ಮತ್ತು ದಕ್ಷಿಣದಿಂದ ಪ್ರವೇಶವನ್ನು ಕಲ್ಪಿಸಲಾಗಿದೆ.ಪೂರ್ವದ ಮುಖ್ಯ ಪ್ರವೇಶದ್ವಾರವು ಸಪ್ತಶಾಖೆಗಳಿಂದ ಅಲಂಕೃತಗೊಂಡಿದೆ.ಪೇದ್ಯದಲ್ಲಿ ರತಿ, ಮನ್ಮಥರು ಮತ್ತು ಶೈವ ದ್ವಾರಪಾಲಕರಿರುವರು.ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಉತ್ತರಾಂಗದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಮತ್ತು ಇಕ್ಕೆಲಗಳಲ್ಲಿ ಶಿವನ ವಿವಿಧ ಅವತಾರಗಳನ್ನು ತೋರಿಸಲಾಗಿದೆ. ಹದಿಮೂರು ಜೋಡಿ ಋಷಿಗಣ ಅಥವ ಗಣಾಧರರಿದ್ದಾರೆ.

ನವರಂಗದ ಮುಂಭಾಗದಲ್ಲಿ ವಿಶಾಲವಾದ ತೆರೆದ ಮಹಾಮಂಟಪವಿದೆ.ಇಲ್ಲಿ ವಿಭಿನ್ನ ಶೈಲಿಯ ಅರವತ್ನಾಲ್ಕು ಕಂಭಗಳಿವೆ. ಸುತ್ತಲೂ ಮುವತ್ತೆರಡು ಅರೆಗಂಭಗಳ ಕಕ್ಷಾಸನವಿದೆ. ಹೊರಭಾಗದ ಅಧಿಷ್ಠಾನವು ಅನೇಕ ದಿಂಡುಗಳಿಂದ ನಿರ್ಮಾಣಗೊಂಡಿದೆ. ಮಧ್ಯದ ನಾಲ್ಕು ಕಂಭಗಳಿಗೆ ಹೊಂದಿಕೊಂಡಂತೆ ನಾಟ್ಯವೇದಿಕೆಯಿದೆ.ಈ ನಾಲ್ಕೂ ಕಂಭಗಳ ಪಾದಭಾಗಗಳಲ್ಲಿ ವಿವಿಧ ದೇವ–ದೇವತೆಯರ ಕಿರುಶಿಲ್ಪಗಳಿವೆ. ಭುವನೇಶ್ವರಿಯಲ್ಲಿ ಪರಿವರಸಮೇತ ಅಷ್ಠದಿಕ್ಪಾಲಕರಿದ್ದಾರೆ.ಅವರು ಕ್ರಮವಾಗಿ ಕುಬೇರ, ಈಶಾನ, ಇಂದ್ರ, ಅಗ್ನಿ, ಯಮ, ನಿಋುತಿ, ವರುಣ ಮತ್ತು ವಾಯು.ಇವರು ತಮ್ಮ ವಾಹನಗಳಾದ ಕುದುರೆ, ನಂದಿ, ಆನೆ, ಟಗರು, ಕೋಣ, ನರ, ಮಕರ ಹಾಗು ಆಡು ಇವುಗಳ ಮೇಲೆ ಕುಳಿತಿರುವರು.

ಮಹಾಮಂಟಪಕ್ಕೆ ಹೊಂದಿಕೊಂಡಂತೆ ಉತ್ತರ ದಿಕ್ಕಿನಲ್ಲಿ ದಕ್ಷಿಣಾಭಿಮುಖವಾಗಿ ನರಸಿಂಹ ದೇವಾಲಯವಿದೆ.ಈ ದೇವಾಲಯವು ಚಿಕ್ಕದಾಗಿದ್ದರೂ ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ ಮತ್ತು ಚಿಕ್ಕ ಮುಖಮಂಟಪವನ್ನು ಹೊಂದಿದೆ.ಇದು ನಂತರ ಕಾಲದಲ್ಲಿ ನಿರ್ಮಾಣಗೊಂಡಿರುವುದರಿಂದ ಕಲ್ಲೇಶ್ವರ ದೇವಾಲಯಕ್ಕಿಂತ ಸ್ವಲ್ಪ ಭಿನ್ನವಾಗಿ ಕಾಣುತ್ತದೆ.ಹೊರ ಭಿತ್ತಿಯು ಜೀರ್ಣೋದ್ಧಾರಗೊಂಡಿದೆ. ಗರ್ಭಗೃಹದಲ್ಲಿರುವ ನರಸಿಂಹನ ಶಿಲ್ಪವು ಆಕರ್ಷಣೀಯವಾಗಿದೆ.ನರಸಿಂಹನಿಗೆ ಹದಿನಾಲ್ಕು ಕೈಗಳಿದ್ದು ಹಿರಣ್ಯಕಶಿಪುವನ್ನು ಸಂಹಾರಮಾಡುತ್ತಿರುವಂತೆ ತೋರಿಸಲಾಗಿದೆ. ಶಿಲ್ಪದ ಹಿಂಬದಿಯಲ್ಲಿ ಪ್ರಭಾವಳಿಯಿದ್ದು ಕೆಳಭಾಗದ ಎರಡೂ ಬದಿಗಳಲ್ಲಿ ಶ್ರೀದೇವಿ–ಭೂದೇವಿಯರನ್ನು ತೋರಿಸಲಾಗಿದೆ. ಶಿಲ್ಪವು ಪೀಠದ ಮೇಲಿದ್ದು, ಪೀಠದಲ್ಲಿ ಗರುಡನ ಉಬ್ಬು ಶಿಲ್ಪವಿದೆ.

ಮಹಾಮಂಟಪಕ್ಕೆ ಹೊಂದಿಕೊಂಡಂತೆ ಪೂರ್ವ ದಿಕ್ಕಿಗೆ ಅಂದರೆ ಕಲ್ಲೇಶ್ವರ ದೇವಾಲಯದ ಗರ್ಭಗೃಹಕ್ಕೆ ಅಭಿಮುಖವಾಗಿ ಸೂರ್ಯದೇವಾಲಯವಿದೆ.ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳಗಳನ್ನು ಹೊಂದಿದೆ.ಗರ್ಭಗೃಹದಲ್ಲಿರುವ ಸೂರ್ಯನ ಶಿಲ್ಪವೂ ಸಹ ಆಕರ್ಷಕವಾಗಿದೆ.ಶಿಲ್ಪವು ಪೀಠದ ಮೇಲಿದ್ದು ಪೀಠದಲ್ಲಿ ಏಳು ಕುದುರೆಗಳನ್ನು ತೋರಿಸಿರುವರು.ದ್ವಿಭುಜಧಾರಿಯಾದ ಸೂರ್ಯನು ತನ್ನ ಕೈಗಳಲ್ಲಿ ಭುಜಕ್ಕೆ ಸಮಾನಾಂತರವಾಗಿ ಪದ್ಮ ಹಿಡಿದಿರುವನು.ಶಿಲ್ಪದ ಹಿಂಬದಿಯಲ್ಲಿ ಪ್ರಭಾವಳಿಯಿದ್ದು ಇದರಲ್ಲಿ ದ್ವಾದಶ ಆದಿತ್ಯರನ್ನು ತೋರಿಸಿರುವರು.ಇಕ್ಕೆಲಗಳಲ್ಲಿ ಉಷ–ಪ್ರತ್ಯುಷರು ಬಿಲ್ಲು–ಬಾಣಗಳನ್ನಿಡಿದಿರುವರು.

ಕಲ್ಲೇಶ್ವರ ದೇವಾಲಯದ ಗರ್ಭಗೃಹ, ಅಂತರಾಳ ಭಾಗಗಳು ಮೂಲತಃ ರಾಷ್ಟ್ರಕೂಟ ಕಾಲದ್ದಾಗಿವೆ. ಹೊರಭಿತ್ತಿಯಲ್ಲಿ ಸ್ಪಷ್ಟವಾಗಿ ರಾಷ್ಟ್ರಕೂಟ ಕಾಲದ ಅಲಂಕರಣಗಳು ಗೋಚರಿಸುತ್ತವೆ. ದೇವಾಲಯದ ಆವರಣದಲ್ಲಿಯೂ ರಾಷ್ಟ್ರಕೂಟ ಕಾಲದ ಕಿರುಗುಡಿಗಳು ಹಾಗೂ ಇತರೆ ಅವಶೇಷಗಳು ಕಂಡುಬರುತ್ತವೆ. ನವರಂಗ ಮತ್ತು ಕಲ್ಯಾಣದ ಚಾಲುಕ್ಯರ ಕಾಲಾವಧಿಯಲ್ಲಿ ನಿರ್ಮಾಣಗೊಂಡಿವೆ. ಅಧಿಷ್ಠಾನ ಭಾಗದಲ್ಲಿ ಈ ರೀತಿಯ ವ್ಯತ್ಯಾಸಗಳನ್ನು ಗುರುತಿಸಬಹುದು. ದೇವಾಲಯದ ಮಹಾಮಂಟಪವು ಹರಿಹರೇಶ್ವರ ದೇವಾಲಯದ ಮಹಾಮಂಟಪವನ್ನು ಹೋಲುತ್ತದೆ.

ನೀಲಗುಂದದ ಭೀಮೇಶ್ವರ ದೇವಾಲಯವು ದಾವಣಗೆರೆ ಜಿಲ್ಲೆಯ ದೇವಾಲಯಗಳಲ್ಲೇ ಅತ್ಯಂತ ಆಕರ್ಷಣೀಯವಾದುದಾಗಿದೆ.ವಾಸ್ತುಶೈಲಿಯ ದೃಷ್ಠಿಯಿಂದಲೂ ಸಹ ಪ್ರಮುಕವಾದುದಾಗಿದೆ.ಕಲ್ಯಾಣದ ಚಾಲುಕ್ಯರು, ಕಳಚೂರಿಗಳು ಹಾಗೂ ಹೊಯ್ಸಳರು ಈ ದೇವಾಲಯವನ್ನು ಪೋಷಿಸಿದ್ದಾರೆ ಎನ್ನುವ ವಿವರವು ಇಲ್ಲಿನ ಶಾಸನಗಳಿಂದ ತಿಳಿದುಬರುತ್ತದೆ.

ದೇವಾಲಯವು ತಳವಿನ್ಯಾಸದಲ್ಲಿ ಆಕರ್ಷಕವಾಗಿದ್ದು ಮೂರು ಗರ್ಭಗೃಹಗಳನ್ನು ಹೊಂದಿದೆ.ಮೂರು ಗರ್ಭಗೃಹಗಳು ಮಧ್ಯದ ಒಂದೇ ನವರಂಗಕ್ಕೆ ಸೇರಿಕೊಂಡಿವೆ. ಒಟ್ಟಾರೆಯಾಗಿ ದೇವಾಲಯದ ತಳವಿನ್ಯಾಸ ಗ್ರೀಕ್‌ಕ್ರಾಸ್ ಮಾದರಿಯಲ್ಲಿ ಕಂಡುಬರುತ್ತದೆ.ಪೂರ್ವಾಭಿಮುಖವಾಗಿರುವ ಮುಖ್ಯ ಗರ್ಭಗೃಹದಲ್ಲಿ ಭೀಮೇಶ್ವರ ಹೆಸರಿನ ಲಿಂಗವನ್ನು ಹೊಂದಿದೆ. ವಿತಾನದಲ್ಲಿ ಮುಗುಚಿದ ಪದ್ಮದ ಅಲಂಕರಣೆಯಿದೆ. ಪ್ರವೇಶದ್ವಾರವು ಪಂಚಶಾಖೆಗಳಿಂದ ಅಲಂಕೃತಗೊಂಡಿದೆ.ಪೇದ್ಯದಲ್ಲಿ ಶೈವದ್ವಾರಪಾಲಕರು, ಸ್ತ್ರೀಪರಿಚರಕರೂ ಇರುವರು. ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ.ಅಂತರಾಳವು ಸರಳವಾಗಿದೆ.ಇದರ ಪ್ರವೇಶದ್ವಾರವೂ ಸಹ ಗರ್ಭಗೃಹದ ಪ್ರವೇಶದ್ವಾರದಂತಿದೆ.ಉತ್ತರಾಂಗದಲ್ಲಿ ಮಕರತೋರನವಿದ್ದು ಇಲ್ಲಿ ಉಮಾಮಹೇಶ್ವರ, ಗಣೇಶ, ಕಾರ್ತಿಕೇಯರನ್ನು ತೋರಿಸಿರುವರು.ಇನ್ನುಳಿದ ಎರಡೂ ಗರ್ಭಗೃಹಗಳಿಗೆ ತೆರೆದ ಅಂತರಾಳದ ವ್ಯವಸ್ತೆಯನ್ನು ಕಲ್ಪಿಸಲಾಗಿದೆ. ನವರಂಗದ ಮುಂಭಾಗದಲ್ಲಿ ಮುಖಮಂಟಪವನ್ನು ಕಲ್ಪಿಸಿದ್ದು, ಅದನ್ನು ಎರಡೂ ದಿಕ್ಕುಗಳಿಂದ (ಉತ್ತರ–ದಕ್ಷಿಣ) ಪ್ರವೇಶಿಸಬಹುದು. ಪ್ರವೇಶದ್ವಾರಕ್ಕೆ ನಂದಿಮಂಟಪವೂ ಸಹ ಸೇರಿದಂತೆಯೇ ನಿರ್ಮಾಣವಾಗಿರುವುದು ವಿಶೇಷವಾಗಿದೆ.ಹಾಗಾಗಿ ಇದು ಒಮ್ಮೊಮ್ಮೆ ನಾಲ್ಕು ಗರ್ಭಗೃಹಗಳ ದೇವಾಲಯವೇನೋ ಎನ್ನುವಂತೆ ಭಾಸವಾಗುತ್ತದೆ.

ನವರಂಗವು ನಾಲ್ಕು ಆಕರ್ಷಕ ಕಂಭಗಳನ್ನು ಹಗೂ ಹನ್ನೆರಡು ಗೊಡೆಗಂಭಗಳನ್ನು ಹೊಂದಿದೆ.ನವರಂಗದಲ್ಲಿ ನಾಲ್ಕು ಕೋಷ್ಠಗಳಿದ್ದು ಇವುಗಲಲ್ಲಿ ಚತುರ್ಭುಜಧಾರಿ ಗಣೇಶ, ಮಹಿಷಾಸುರಮರ್ಧಿನಿ, ಸಪ್ತಮತೃಕೆ ಮತ್ತು ಯಕ್ಷನ ಶಿಲ್ಪಗಳಿವೆ. ಮಧ್ಯದ ನಾಲ್ಕು ಕಂಭಗಳಿಗೆ ಹೊಂದಿಕೊಂಡಂತೆ ನಾಟ್ಯವೇದಿಕೆಯಿದೆ.ಕಂಭಗಳು ತಿರುಗುಣಿಯಂತ್ರದ ಸಹಯದಿಂದ ನಿರ್ಮಾಣಗೊಂಡಿದ್ದು, ಪೀಠ, ಪಾದ, ವೃತ್ತಾಕಾರದ ದಿಂಡು, ತೆಳುವಾದ ಕುಶನ್‌ಬೊಧಿಗೆ ಹಾಗೂ ಫಲಗೈ ಅಭಾಕಸ್ ಗಳನ್ನು ಹೊಂದಿವೆ. ಕಂಭಗಳು

ಅಪೂರ್ಣಗೊಂಡಿದ್ದು ಕೆಲ ಕಂಭಗಳ ಪಾದಭಾಗದಲ್ಲಿ ಶಿವನ ವಿವಿಧ ರೂಪಗಳನ್ನು ತೋರಿಸಿರುವರು.ಭುವನೇಶ್ವರಿಯು ಆಕರ್ಷಕವಾಗಿದ್ದು, ಇಲ್ಲಿ ಅಷ್ಠದಿಕ್ಪಾಲಕರನ್ನು ತೋರಿಸಲಾಗಿದೆ.ಮಧ್ಯದಲ್ಲಿ ಬಾಳೆಮೊಗ್ಗಿನ ಕೆತ್ತನೆಯಿದೆ.

ನವರಂಗದ ಪ್ರವೇಶದ್ವಾರವು ಪಂಚಶಾಖೆಗಳನ್ನು ಹೊಂದಿದೆ.ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ.ಮುಂಭಾಗದಲ್ಲಿ ನಾಲ್ಕು ಕಂಬಗಳ ಮುಖಮಂಟಪವಿದೆ.ಇದರ ಪ್ರವೇಶದ್ವಾರವು ಪಂಚಶಾಖೆಗಳನ್ನು ಹೊಂದಿದೆ.ಮುಖಮಂಟಪಕ್ಕೆ ಹೊಂದಿಕೊಂಡಂತೆ ಮುಂಭಾಗದಲ್ಲಿ ಪ್ರತ್ಯೇಕವಾದ ಚಿಕ್ಕ ನಂದಿಮಂಟಪವಿದೆ.

ಏರುವಿನ್ಯಾಸದಲ್ಲಿ, ದೇವಾಲಯವು ಎತ್ತರವಾದ ಅಧಿಷ್ಟಾನದ ಮೇಲೆ ನಿಂತಿದ್ದು ಪೀಠ, ಉಪಾನ, ಜಗತಿ, ಪದ್ಮ, ತ್ರಿಪಟ್ಟಕುಮುದ, ದಂತಪಂಕ್ತಿ ಮತ್ತು ಕಪೋತಭಾಗಗಳನ್ನು ಹೊಂದಿದೆ. ದಂತಪಂಕ್ತಿ ಭಾಗದಲ್ಲಿ ಕಿರು ಶಿಲ್ಪಗಳಿವೆ. ಸರಸ್ವತಿ, ಯಕ್ಷ–ಯಕ್ಷಿ, ಸೀತೆ, ಹನುಮಂತ, ವಾದ್ಯಗಾರರು, ನೃತ್ಯಗಾರ್ತಿಯರು, ಕೀರ್ತಿಮುಖಗಳು ಹಾಗೂ ಇನ್ನಿತರ ಶಿಲ್ಪಗಳಿಂದ ಅಧಿಷ್ಟಾನವು ಅಲಂಕೃತಗೊಂಡಿದೆ. ಅಧಿಷ್ಟಾನದ ಮೇಲಿನ ಭಿತ್ತಿಯು ಭದ್ರ –ಸಲಿಲಾಂತರಗಳಿಂದ ಕೂಡಿದೆ.ಭದ್ರದಲ್ಲಿ ಕೋಷ್ಟಪಂಜರ, ಸಲಿಲಾಂತರದಲ್ಲಿ ಸ್ತಂಭಪಂಜರಗಳನ್ನು ಅಳವಡಿಸಲಾಗಿದೆ. ಗರ್ಭಗೃಹದ ಮೂರು ಪಾರ್ಶ್ವಗಳಲ್ಲಿ ದೇವಕೋಷ್ಠಗಳಿದ್ದು, ಅವುಗಳಲ್ಲಿ ಕ್ರಮವಾಗಿ ಸಂಹಾರ ವಿಷ್ಣು, ಜಠಾಧಾರಿ ಶಿವ ಹಾಗೂ ಬ್ರಹ್ಮ(?)ನ ಶಿಲ್ಪಗಳಿವೆ. ಆದರೆ ಇನ್ನುಳಿದ ಗರ್ಭಗೃಹಗಳ ಬಾಹ್ಯಭಿತ್ತಿಯಲ್ಲಿ ಈ ರೀತಿಯಾದ ದೇವಕೋಷ್ಠಗಳ ಅಳವಡಿಕೆಯಿಲ್ಲ. ತ್ರಿಕೂಟಮಾದರಿಯಲ್ಲಿರುವ ಈ ದೇವಾಲಯದ ಮುಖ್ಯಗರ್ಭಗೃಹದ ಮೇಲ್ಭಾಗದಲ್ಲಿ ಮಾತ್ರ ಶಿಖರವನ್ನು ನಿರ್ಮಿಸಲಾಗಿದ್ದು ಉಳಿದ ಎರಡೂ ಗರ್ಭಗೃಹಗಳ ಮೇಲೆ ಯಾವುದೇ ರೀತಿಯ ಶಿಖರವಿರುವುದಿಲ್ಲ. ಮುಖ್ಯಗರ್ಭಗೃಹದ ಮೇಲ್ಭಾಗದಲ್ಲಿ ತ್ರಿತಲ ವಿಮಾನವಿದ್ದು ಸ್ತೂಪಿಯಲ್ಲಿ ಕಲಶವಿದೆ.

ಪ್ರಸ್ತುತ ದೇವಾಲಯವು ವಾಸ್ತುಶೈಲಿಯ ದೃಷ್ಠಿಯಿಂದ ದಾವಣಗೆರೆ ಜಿಲ್ಲೆಯಲ್ಲೇ ತುಂಬಾ ಮುಖ್ಯವಾಗಿದ್ದು ಅಷ್ಠೇ ಆಕರ್ಷಣೀಯವೂ ಆಗಿದೆ.ಕಲ್ಯಾಣದ ಚಾಲುಕ್ಯರು, ಕಳಚೂರಿಗಳು ಹಾಗೂ ಹೊಯ್ಸಳರು ಈ ದೇವಾಲಯಕ್ಕೆ ರಾಜಾಶ್ರಯವನ್ನು ಕಲ್ಪಿಸಿ ಹೇರಳವಾಗಿ ದಾನ – ದತ್ತಿಗಳನ್ನು ನೀಡಿರುವುದು ಇಲ್ಲಿನ ಶಾಸನಗಳಿಂದ ಸ್ಪಷ್ಠವಾಗುತ್ತದೆ. ಹಾಗಾಗಿ ದೇವಾಲಯ ನಿರ್ಮಾಣದಲ್ಲಿ ಅನೇಕ ಹೊಸ ಹೊಸ ಅಂಶಗಳನ್ನು ಅಳವಡಿಸಿಕೊಂಡಿರುವುದನ್ನು ಗುರುತಿಸಬಹುದು. ಬಾಹ್ಯರಚನೆಯಲ್ಲಿ ವೇಸರ ಶೈಲಿಯ ಅಂಶಗಳು ಕಂಡುಬರುತ್ತವೆ.ಬಿತ್ತಿಯ ಮೇಲಿನ ಪ್ರಸ್ತರಭಾಗದಲ್ಲಿರುವ ಕಪೋತವು ದೇವಾಲಯದ ಸುತ್ತಲೂ ಹೊರಚಾಚಿದಂತಿದೆ.ಈ ಭಾಗವನ್ನು ಹಲವಾರು ಕೋಷ್ಠಪಂಜರಗಳಿಂದ ಅಲಂಕರಿಸಲಾಗಿದೆ.ಹೀಗೆ ಭೀಮೇಶ್ವರ ದೇವಾಲಯವು ತಳವಿನ್ಯಾಸ ಹಾಗೂ ಏರುವಿನ್ಯಾಸದಲ್ಲಿ ದ್ರಾವಿಡ ಶೈಲಿಯ ಅಂಶಗಳನ್ನು ಹೊಂದಿದ್ದರೂ ಏರುವಿನ್ಯಾಸದಲ್ಲಿ ನಾಗರ ಶೈಲಿಯ ಅಂಶಗಳು ಕಂಡುಬರುವುದರಿಂದ ಇದನ್ನು ವೇಸರ ಶೈಲಿಯ ದೇವಾಲಯ ಎಂದು ಹೇಳಬಹುದು.ಡಂಬಳದ ದೊಡ್ಡಬಸಪ್ಪ ದೇವಾಲಯದ ರಚನಾಶೈಲಿಯನ್ನು ಈ ದೇವಾಲಯವು ಬಹುಮಟ್ಟಿಗೆ ಹೋಲುತ್ತದೆ.

ದಾವಣಗೆರೆ ತಾಲ್ಲೂಕಿನ ರಾಷ್ಟ್ರೀಯ ಹೆದ್ದಾರಿ–೪ ಕ್ಕೆ ಹೊಂದಿಕೊಂಡಂತೆ ಇರುವ ನೀರ್ಥಡಿಯ ರಂಗನಾಥ ದೇವಾಲಯವು ಚಿತ್ರದುರ್ಗದ ಪಾಳೆಯಗಾರರ ಕಾಲಾವಧಿಯಲ್ಲಿ ನಿರ್ಮಾಣಗೊಂಡಿರುವ ದೇವಾಲಯಗಳಲ್ಲೇ ಅತ್ಯಂತ ಆಕರ್ಷಣೀಯವಾದುದಾಗಿದೆ. ಆರಂಭದ ಪಾಳೆಯಗಾರನಾದ ಮತ್ತಿ ತಿಮ್ಮಣ್ಣನಾಯಕನು ಕ್ರಿ.ಶ ೧೫೮೧ ರಲ್ಲಿ ದೇವಾಲಯವನ್ನು ನಿರ್ಮಾಣಮಾಡಿದ ಬಗ್ಗೆ ಇಲ್ಲಿನ ಶಾಸನದಿಂದ ತಿಳಿದುಬರುತ್ತದೆ.ಆದರೆ ಕಾಲಾನಂತರ ಮುಸ್ಲಿಂರ ಆಕ್ರಮಣಕ್ಕೊಳಗಾದ ಈ ದೇವಾಲಯವನ್ನು ಕ್ರಿ.ಶ ೧೬೯೭–೯೮ ರಲ್ಲಿ ಬಿಚ್ಚುಗತ್ತಿ ಭರಮಣ್ಣನಾಯಕನು ಜೀರ್ಣೋದ್ದಾರ ಮಾಡಿಸಿದನು. ದೇವಾಲಯವು ತಳವಿನ್ಯಾಸದಲ್ಲಿ ಗರ್ಭಗೃಹ,ಅಂತರಾಳ,ನವರಂಗ ಹಾಗೂ ಮುಖಮಂಟಪಗಳನ್ನು ಒಳಗೊಂಡಿದೆ.ಗರ್ಭಗೃಹದಲ್ಲಿರುವ ಸ್ಥಾನಿಕರೂಪದ ವಿಷ್ಣುವು ಚತುರ್ಭುಜಧಾರಿಯಾಗಿದ್ದು ಶಂಖ–ಚಕ್ರಗಳನ್ನಿಡಿದು, ಅಭಯ ಹಾಗೂ ವರದ ಮುದ್ರೆಯಲ್ಲಿರುವನು.ಈ ಲಕ್ಷಣಗಳ ಹಿನ್ನೆಲೆಯಲ್ಲಿ ಈತನನ್ನು ಜನಾರ್ಧನನೆನ್ನಬಹುದು.ಗರ್ಭಗೃಹದ ಪ್ರವೇಶದ್ವಾರವು ಕಿರಿದಾಗಿದ್ದು, ಕಮಾನಿನಾಕರದಲ್ಲಿರುವುದು ವಿಷೇಶ. ಏಕೆಂದರೆ ಈ ರೀತಿಯ ಲಕ್ಷಣವು ಈ ಭಾಗದ ಯಾವುದೇ ದೇವಾಲಯದಲ್ಲಿ ಕಂಡುಬರುವುದಿಲ್ಲ. ಜೀರ್ಣೋದ್ದಾರ ಸಂದರ್ಭದಲ್ಲಿ ಪ್ರಾಯಷಃ ಮುಸ್ಲಿಂ ದಾಳಿಯ ಪರಿಣಾಮವಾಗಿ ಈ ಆಂಶವನ್ನು ಸೇರ್ಪಡೆಮಾಡಿರುವ ಸಾಧ್ಯತೆಯಿದೆ.ಅಂತರಾಳದಲ್ಲಿ ಉತ್ಸವಮೂರ್ತಿಯಿದ್ದು ಪ್ರವೇಶದ್ವಾರವು ಪಂಚಶಾಖೆಗಳಲ್ಲಿದೆ.ಅಂತರಾಳದ ಮುಂಭಾಗದಲ್ಲಿ ತೆರೆದ ಅರ್ಧಮಂಟಪವಿದೆ.ಇದರಲ್ಲಿ ಎರಡೂಕಡೆ ಒಂದೊಂದು ಗರ್ಭಗೃಹಗಳನ್ನು ಕಲ್ಪಸಿದ್ದು ಒಂದರಲ್ಲಿ ಲಕ್ಷ್ಮಿಯನ್ನು, ಮತ್ತೊಂದರಲ್ಲಿ ಹನ್ನೊಂದು ಶ್ರೀ ಆಳ್ವಾರರ ಬಿಡಿ ಶಿಲ್ಪಗಳನ್ನು (ಪ್ರಾಯಷಃ ನಂತರದ ಕಾಲದಲ್ಲಿ) ಪ್ರತಿಷ್ಟಾಪಿಸಲಾಗಿದೆ.

ನಾಲ್ಕು ಕಂಭಗಳಿಂದ ಕೂಡಿರುವ ನವರಂಗವು ನಾಟ್ಯವೇದಿಕೆಯನ್ನು ಹೊಂದಿದೆ. ಕಂಭಗಳು ಆಕರ್ಷಣೀಯವಾಗಿದ್ದು ಪೀಠ,ಪಾದ,ಬಹುಮುಖದಿಂಡು,ಚೌಕ ಮತ್ತು ಪುಷ್ಪಾಲಂಕಾರ ಭೋದಿಗೆಯನ್ನು ಒಳಗೊಂಡಿವೆ. ಪಾದ ಮತ್ತು ಚೌಕ ಭಾಗಗಳಲ್ಲಿ ವಿವಿಧ ರೂಪದ ಉಬ್ಬುಶಿಲ್ಪಗಳಿವೆ. ಅವುಗಳಲ್ಲಿ ಉಗ್ರನರಸಿಂಹ, ಲಕ್ಷ್ಮೀನಾರಾಯಣ, ವಾಮನ, ರಾವಣ, ನರಸಿಂಹ, ವಾಹನಾರೂಢ ಇಂದ್ರ, ಗಣೇಶ,ರಾಧ, ಕೃಷ್ಣ, ನೃತ್ಯಗಾರರು ಹಾಗೂ ಇನ್ನಿತರರು ಪ್ರಮುಖವು. ನವರಂಗಕ್ಕೆ ಮೂರು ದಿಕ್ಕಿನಲ್ಲಿ ಪ್ರವೇಶದ್ವಾರಗಳನ್ನು ಅಳವಡಿಸಲಾಗಿದೆ.ಪೂರ್ವದಿಕ್ಕಿನಲ್ಲಿರುವ ಪ್ರವೇಶದ್ವಾರವು ಪ್ರಮುಖವಾಗಿದ್ದು, ತ್ರಿಶಾಖೆಗಳನ್ನೊಳಗೊಂಡಿದೆ.ಲಲಾಟದಲ್ಲಿ ಗಜಲಕ್ಷ್ಮಿ ಹಾಗೂ ಪೇದ್ಯದಲ್ಲಿ ವೈಷ್ಣವ ದ್ವಾರಪಾಲಕರಿರುವರು.ಮಕರತೋರಣವು ಅಲಂಕಾರವಾಗಿದೆ.ನವರಂಗದ ಮುಂಭಾಗದಲ್ಲಿ ಚಿಕ್ಕದಾದ ತೆರೆದ ಮುಖಮಂಟಪವಿದೆ.ಮಂಟಪವು ಜಗತಿಯನ್ನು ಹೊಂದಿದೆ. ಇಲ್ಲಿರುವ ಕಂಭಗಳು ಸಿಂಹಮಾದರಿಯ (ಹಂಪಿಯ ದೇವಾಲಯಗಳಲ್ಲಿರುವಂತೆ)ಸಂಯೋಗಸ್ತಂಭಗಳಾಗಿವೆ. ಈ ಮಾದರಿಯ ಕಂಭಗಳನ್ನು ವಿಜಯನಗರಕಾಲದ ದೇವಾಲಯಗಳಲ್ಲಿ ಸಾಮಾನ್ಯವಾಗಿ ನೋಡುತ್ತೇವೆ. ಇದಕ್ಕೆ ಹೊಂದಿಕೊಂಡಂತೆ ತೋರಣವನ್ನು ಅಳವಡಿಸಲಾಗಿದೆ. ಇಲ್ಲಿರುವ ಸ್ತಂಭಗಳಮೇಲೂ ಉಬ್ಬುಶಿಲ್ಪಗಳನ್ನು ಕಂಡರಿಸಿರುವರು.ನವರಂಗದ ಇನ್ನುಳಿದ ಎರಡೂ ಪ್ರವೇಶದ್ವಾರಗಳೂ ಇದೇ ಮಾದರಿಯಲ್ಲಿವೆ.

ಏರುವಿನ್ಯಾಸದಲ್ಲಿ, ದೇವಾಲಯವು ಸಂಪೂರ್ಣವಾಗಿ ಎತ್ತರವಾದ ಅಧಿಷ್ಟಾನದ ಮೇಲಿದೆ. ಗರ್ಭಗೃಹ ಮತ್ತು ಅಂತರಾಳದ ಅಧಿಷ್ಟಾನ ಹಾಗೂ ಬಾಹ್ಯಭಿತ್ತಿಯು ಒಂದು ರೀತಿಯಲ್ಲಿದ್ದರೆ, ನವರಂಗ ಮತ್ತು ಮುಖಮಂಟಪದ ಅಧಿಷ್ಟಾನವು ಮತ್ತೊಂದು ರೀತಿಯಲ್ಲಿದೆ.ಪ್ರಾಯಷಃ ಬೇರೆ ಬೇರೆ ಕಾಲಘಟ್ಟಗಳಲ್ಲಿ ದೇವಾಲಯವು ನಿರ್ಮಾಣಗೊಂಡಿರುವುದರಿಂದ ಈ ರೀತಿಯ ವ್ಯತ್ಯಾಸಗಳಾಗಿರಬಹುದು.ಅಧಿಷ್ಟಾನವು ಉಪಾನ, ಜಗತಿ, ಪದ್ಮ, ಗಳ, ಕಂಠ, ತ್ರಿಪಟ್ಟಕುಮುದ, ಹಾಗೂ ಪ್ರತಿಗಳನ್ನು ಹೊಂದಿದೆ.ಇಲ್ಲಿರುವ ಪ್ರತಿಯೊಂದು ಭಾಗಗಳಲ್ಲಿಯೂ ವಿವಿಧ ಮಾದರಿಯ ಉಬ್ಬುಶಿಲ್ಪಗಳ ಕೆತ್ತನೆಯಿದೆ.ಗರ್ಭಗೃಹದ ಮೇಲಿನ ಭಿತ್ತಿಯು ಅನೇಕ ಭಾಗಗಳನ್ನು ಹೊಂದಿದ್ದು ಮೇಲ್ಭಾಗದಲ್ಲಿ ತ್ರಿತಲ ವಿಮಾನವಿದೆ. ಪ್ರತಿಯೊಂದು ತಲದ ಕರ್ಣ ಕೂಟ ಭಾಗಗಳಲ್ಲಿ ವಿಷ್ಣುವಿನ ಉಬ್ಬುಶಿಲ್ಪಗಳಿವೆ. ಸ್ತೂಪಿಯ ನಾಲ್ಕೂ ಪಾರ್ಶ್ವಗಳಲ್ಲಿ ಸಿಂಹ ಕೀರ್ತಿಮುಖಗಳಿವೆ.ಕಲಶವನ್ನೂ ಸಹ ಶಿಲೆಯಲ್ಲಿಯೇ ಮಾಡಿರುವುದು ವಿಶೇಷ. ಏಕೆಂದರೆ, ಪಾಳೆಯಗಾರ–ವಿಜನಗರ ಕಾಲದಲ್ಲಿ ದೇವಾಲಯಗಳ ಕಪೋತದ ಮೇಲಿನ ಭಾಗವನ್ನು ಸಾಮಾನ್ಯವಾಗಿ ಇಟ್ಟಿಗೆ,ಗಾರೆ ಹಾಗೂ ಗಚ್ಚಿನಿಂದ ನಿರ್ಮಿಸಿರುವುದು ವಾಡಿಕೆ. ಹಾಗಾಗಿ ಈ ದೇವಾಲಯವು ಸ್ವಲ್ಪ ಭಿನ್ನವೆಂದೇ ಹೇಳಬಹುದು.

ದೇವಾಲಯದ ಮುಂಭಾಗದಲ್ಲಿ ದೀಪಸ್ತಂಭವಿದೆ ಹಾಗೂ ಸುತ್ತಲೂ ಪ್ರಾಂಗಣವಿದೆ.ಪ್ರಾಂಗಣದಲ್ಲಿ ಕಲ್ಲಿನ ಅಂಕಣಗಳಿವೆ. ಪ್ರಾಂಗಣಕ್ಕೆ ದ್ವಾರಮಂಟಪವನ್ನು ಅಳವಡಿಸಲಾಗಿದೆ.ದೇವಾಲಯದ ಕೆಲವು ಅಂಶಗಳನ್ನು ಗಮನಿಸಿದರೆ ಇದೊಂದು ಚಾಲುಕ್ಯ–ಹೊಯ್ಸಳ ಮಾದರಿಯ ದೇವಾಲಯವೇನೋ ಎನಿಸುತ್ತದೆ.ಕಾರಣ, ಅಧಿಷ್ಟಾನ ಭಿತ್ತಿ ಮತ್ತು ಅದರಲ್ಲಿರುವ ಶಿಲ್ಪಗಳು.ಆದರೆ ಇದೊಂದು ಪಾಳೆಯಗಾರರ ಶೈಲಿಯ ದೇವಾಲಯವೆಂದೇ ಇಲ್ಲಿನ ಶಾಸನ ಹಾಗೂ ದೇವಾಲಯದ ಲಕ್ಷಣಗಳ ಆಧಾರದ ಮೇಲೆ ಹೇಳಬಹುದು.ಇದೇ ಕಾಲಾವಧಿಯಲ್ಲಿ ಇನ್ನೂ ಅನೇಕ ದೇವಾಲುಗಳು ನಿರ್ಮಾಣಗೊಂಡಿದ್ದು ಅವುಗಳಲ್ಲಿ ಮಾಯಕೊಂಡದ ಓಬಳೇಶ್ವರ, ಶಾಂತಿಸಾಗರದ ಸಿದ್ದೇಶ್ವರ, ಸಂತೇಬೆನ್ನೂರಿನ ಪುಷ್ಕರಿಣಿ ಹಾಗೂ

ಇನ್ನಿತರವು ಪ್ರಮುಖವು.

ದಾವಣಗೆರೆ ಜಿಲ್ಲೆಯಾದ್ಯಾಂತ ಅನೇಕ ದೇವಾಲಯಗಳು ಕಂಡುಬಂದರೂ ಅವುಗಳಲ್ಲಿ ಬಹುತೇಕ ದೇವಾಲಯಗಳಿಗೆ ಶಾಸನಾಧಾರವಿಲ್ಲ. ಕೆಲವಕ್ಕೆ ಶಾಸನಾಧಾರವಿದ್ದೂಶಾಸನ ದೊರೆತಿಲ್ಲದಿರುವ ಸಾಧ್ಯತೆಯನ್ನೂ ಅಲ್ಲಗಳೆಯುವಂತಿಲ್ಲ. ಅಷ್ಟೇ ಸಂಖ್ಯೆಯ ದೇವಾಲಯಗಳಿಗೆ ಶಾಸನಾಧಾರವಿದ್ದರೂ ದೇವಾಲಯ ಅಸ್ತಿತ್ವದಲ್ಲಿಲ್ಲದಿರುವ ಉದಾಹರಣೆಗಳು ಸಾಕಷ್ಟಿವೆ. ಈ ಹಿನ್ನಲೆಯಲ್ಲಿ ದಾವಣಗೆರೆ ಜಿಲ್ಲೆಯಲ್ಲಿ ಕಂಡುಬರುವ ಪ್ರಮುಖವಾದ ದೇವಾಲಯಗಳ ಪಟ್ಟಿಯನ್ನು ಇಲ್ಲಿ ನೀಡಲಾಗಿದೆ.

ಚಿ) ಅವರಗೊಳ್ಳ–ಈಶ್ವರ ದೇವಾಲಯ : ಎ.ಕ.ಸಂ ೧೧, ದಾ–೯೪
ಛ) ಅವರಗೊಳ್ಳ–ವೀರಭದ್ರ ದೇವಾಲಯ : ಎ.ಕ.ಸಂ ೧೧, ದಾ–೯೭
ಛಿ) ಆನೆಕೊಂಡ–ಈಶ್ವರ ದೇವಾಲಯ : ಎ.ಕ.ಸಂ ೧೧, ದಾ–೩&೭
ಜ) ಎಲೆಬೇತೂರು–ಕಲ್ಮೇಶ್ವರ ದೇವಾಲಯ : ಎ.ಕ.ಸಂ ೧೧, ದಾ–೧೨
ಜ) ಕಲ್ಲೇದೇವಪುರ–ಕಲ್ಮೇಶ್ವರ ದೇವಾಲಯ : ಎ.ಕ.ಸಂ ೧೧, ಜ–೩೦&೩೪
ಜಿ) ನಂದಿತಾವರೆ–ಅಮೃತೇಶ್ವರ ದೇವಾಲಯ : ಎ.ಕ.ಸಂ ೧೧, ದಾ–೬೯
ಠ) ನೀಲಗುಂದ–ಭೀಮೇಶ್ವರ ದೇವಾಲಯ : ಸೌ.ಇ.ಇ ೯,–೧೮೧,೨೯೩,
ಎ) ನೀಲಗುಂದ–ಮುಕ್ತರಾಮೇಶ್ವರ ದೇವಾಲಯ : ಸೌ.ಇ.ಇ ೯,–೩೪೦
ಎ) ನೀರ್ಥಡಿ–ರಂಗನಾಥ ದೇವಾಲಯ : ಎ.ಕ.ಸಂ ೧೧, ದಾ–೧೬೪&೧೬೫
ಠಿ) ಬಾಗಳಿ–ಕಲ್ಮೇಶ್ವರ ದೇವಾಲಯ : ಸೌ.ಇ.ಇ ೯,–೭೫
ಇ) ಹರಿಹರ–ಹರಿಹರೇಶ್ವರ ದೇವಾಲಯ : ಎ.ಕ.ಸಂ ೧೧, ದಾ–೨೨,೫೯
ಟ) ಲೋಕಿಕೆರೆ–ಈಶ್ವರ ದೇವಾಲಯ : ಎ.ಕ.ಸಂ ೧೧, ದಾ–೧೨೯
ಟ) ಬೆಳಗುತ್ತಿ–ಚನ್ನಕೇಶವದೇವಾಲಯ : ಕ್ರಿ.ಶ ೧೧೮೦
ಟಿ) ಮಾಧನಭಾವಿ–ಮಾಧವೇಶ್ವರ ದೇವಾಲಯ : ಕ್ರಿ.ಶ ೧೨೨೨
ಠ) ಶಾಂತಿಸಾಗರ–ಸಿದ್ದೇಶ್ವರ ದೇವಾಲಯ : ಕ್ರಿ.ಶ ೧೫೪೬
ಠಿ) ಹಲವಾಗಿಲು–ಕಲ್ಮೇಶ್ವರ ದೇವಾಲಯ : ಕ್ರಿ.ಶ ೧೨೮೨
ಡ) ಹಿರೇಕೋಗಿಲೂರು–ಕಲ್ಮೇಶ್ವರ ದೇವಾಲಯ : ಕ್ರಿ.ಶ ೧೨೬೮

**ಆಕರಗ್ರಂಥಗಳು**


1. ಕ್ಷೇತ್ರಕಾರ್ಯ ವರದಿ.
2. ಎಫಿಗ್ರಾಫಿಯಾಕರ್ನಾಟಿಕಾ. ಸಂಪುಟ ೭ ಮತ್ತು ೧೧.
3. ಸೌತ್ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್‌ಸಂಪುಟ ೯
4. ಕರ್ನಾಟಕ ವಿಶ್ವವಿದ್ಯಾಲಯ ಶಾಸನ ಸಂ.೧
5. ಎಂ.ಎ.ಆರ್ ವರದಿಗಳು – (೧೯೨೯–೪೦)
6. ಕೆ.ಬಿ. ಶಿವತಾರಕ್ –ಕರ್ನಾಟಕದ ಪುರಾತತ್ವ ನೆಲೆಗಳು, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,೨೦೦೧.
7. ಚಿದಾನಂದ ಮೂರ್ತಿ ಎಂ. –ಕನ್ನಡ ಶಾಸನಗಳ ಸಾಂಸ್ಕೃತಿಕಅಧ್ಯಯನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೬೬.
8. ಸುರೇಶ ಬಿ. –ಚಿತ್ರದುರ್ಗ–ದಾವಣಗೆರೆ ಜಿಲ್ಲೆಗಳ ದೇವಾಲಯಗಳು, ಸಂಶೋಧನ ಪ್ರಕಾಶನ, ಬಾಲೇನಹಳ್ಳಿ, ೨೦೦೯.
9. ಲಕ್ಷ್ಮಣತೆಲಗಾವಿ ಮತ್ತು ಎಂ.ವಿ ಶ್ರೀನಿವಾಸ (ಸಂ) –ಚಂದ್ರವಳ್ಳಿ, ೧೯೭೬